

ಫಳಫಳ ಹೊಳೆಯುವ ಹಳದಿ ಲೋಹದೊಂದಿಗಿನ ಫ್ಯಾಷನ್ ನಂಟು ಇಂದು ನಿನ್ನೆಯದಲ್ಲ. ಚಿನ್ನದೊಡವೆ 'ಎವರ್‌ಗ್ರೀನ್ ಹೀರೊ' ಆಗಿ ಫ್ಯಾಷನ್ ಜಗತ್ತಿನಲ್ಲಿ ರಾಜ್ಯಭಾರ ನಡೆಸಲು ಅದಕ್ಕಿರುವ 'ಚುಂಬಕ ಶಕ್ತಿ'ಯೇ ಪ್ರಮುಖ ಕಾರಣ. ಸಿರಿವಂತರ ಗತ್ತು ಪ್ರದರ್ಶನಗೊಳ್ಳುವುದು ಚಿನ್ನಾಭರಣದಿಂದಲೇ. ಧನಿಕರ ತಿಜೋರಿಯಲ್ಲಿ ರಾರಾಜಿಸುವ ಹೊನ್ನಿನ ಕರಾಮತ್ತಿಗೆ ಮತ್ತೊಂದು ಕಾರಣ, ಅದು 'ಆಪದ್ಧನ' ಎಂಬ ಅಗ್ಗಳಿಕೆಯನ್ನು ಹೊಂದಿರುವುದು.

ಬಂಗಾರ, ಹೊನ್ನು, ಹಳದಿ ಲೋಹ, ಸುವರ್ಣ, ಹೇಮ. ಕನಕ... ಹೀಗೆ ಯಾವ ಹೆಸರಿನಲ್ಲಾದರೂ ಕರೆಯಿರಿ. ಅದು ಚಿನ್ನ ಎಂದರೆ ಚಿನ್ನವೇ. ಆಕರ್ಷಕ ಬಣ್ಣ, ಮೃದುತ್ವ ಗುಣ, ಆಭರಣ ಮಾಡಲು ಅತ್ಯಂತ ಸೂಕ್ತ, ಅನುಕೂಲ ಹಾಗೂ ಪ್ರೇರಣೆ ನೀಡುವ ಈ ಲೋಹಕ್ಕೆ ಎಂದಿಗೂ ಲೋಹ ಜಗತ್ತಿನಲ್ಲಿ ಅಗ್ರಸ್ಥಾನವೇ.

## ಪಾರಂಪರಿಕ ಆಭರಣಕ್ಕೆ ದೈವತ್ವದ ಕಳೆ

ಲಾಗಾಯ್ತಿನಿಂದಲೂ ಬಂದಿರುವ ಚಿನ್ನದ ಆಭರಣಗಳಿಗೆ ನಮ್ಮ ಪರಂಪರೆಯಲ್ಲಿ ವಿಶೇಷ ಸ್ಥಾನವಿದೆ. ಹೊನ್ನನ್ನು ಲಕ್ಷ್ಮಿ ಎಂದು ಪೂಜಿಸುವುದು ಇದಕ್ಕಾಗಿಯೇ. ದೇವಾಲಯಗಳಲ್ಲೂ ದೇವರನ್ನು ಹೊನ್ನಿನ ಆಭರಣಗಳಿಂದ ಶೃಂಗರಿಸಿದ ಬಳಿಕವೇ ಹೂವಿನ ಅಲಂಕಾರ ಮಾಡುವುದು ಪದ್ಧತಿ. ಈ ಪಾರಂಪರಿಕ ಆಭರಣ ಇದೀಗ ಫ್ಯಾಷನ್‌ನ ಹಾದಿಯನ್ನೂ ಹಿಡಿದಿದೆ. ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣ ಫ್ಯಾಷನ್‌ಗೂ ಸೈ ಎನಿಸಿದೆ. ರೇಷ್ಮೆ ಸೀರೆ ಉಟ್ಟಾಗ ತೊಟ್ಟುಕೊಳ್ಳಲೆಂದೇ ದೇವಾನುದೇವತೆಗಳ ಚಿತ್ರವಿರುವ ಆಭರಣಗಳನ್ನು ಮಹಿಳೆ ಇಷ್ಟಪಡುತ್ತಾಳೆ. ಲಕ್ಷ್ಮಿ ಓಲೆ, ಲಕ್ಷ್ಮಿ ಚಿತ್ರವಿರುವ ನೆಕ್ಲೆಸ್, ಬಳೆಗಳು, ಬ್ರೇಸ್ಲೆಟ್‌ಗಳು, ಇಷ್ಟಗಲ ಕಾಸಿನ ಸರ ಎಲ್ಲದರಲ್ಲೂ ಹೊಸ ವಿನ್ಯಾಸಗಳೇ. ಇವೆಲ್ಲವೂ ಕೈಗೆಟಕುವ ಬೆಲೆಯಲ್ಲಿ ಸಿಕ್ಕಿದರಂತೂ ಮಹಿಳೆಯರಿಗೆ ತಿಜೋರಿ ತುಂಬಿಸುವ ತವಕ!

ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದಾಗಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳಕು ಹಾಕಿಕೊಳ್ಳಲಾರಂಭಿಸಿವೆ. ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ – ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿವೆ. ಎಥ್ನಿಕ್ ಆಭರಣ, ಆಮ್ರಪಾಲಿ ಒಡವೆ, ಸಿಂಪಲ್ ಆಗಿರುವ ಆ್ಯಂಟಿಕ್ ಒಡವೆಗಳು ಮಹಿಳೆಯರಿಗೆ ಆಯ್ಕೆಯನ್ನು ಒದಗಿಸಿ ಮನಗೆಲ್ಲುತ್ತಿವೆ. ಫ್ಯಾಷನ್ ಪ್ರಪಂಚದಲ್ಲಿ ಒಡವೆಗಳು ಮಹಿಳೆಯರ ಜಗತ್ತಿನಲ್ಲಿ ವಿರಾಜಮಾನವಾಗಿ ಮೆರೆಯುತ್ತಿವೆ.

ರೂಬಿ ಅಥವಾ ಮಾಣಿಕ್ಯದಿಂದ ಮಾಡಿದ ಒಡವೆ ಸಾರ್ವಕಾಲಿಕ ಫ್ಯಾಷನ್. ಎಲ್ಲ ರೀತಿಯ ಉಡುಗೆಗಳಿಗೂ ಸೂಕ್ತವಾದವು. ಇದೀಗ ಕಂಟೆಂಪರರಿ ಸ್ಟೈಲ್‌ನ ಹರಳುಗಳಿರುವ ಆಭರಣಗಳನ್ನು ಧರಿಸುವುದು ಕೂಡ ಫ್ಯಾಷನ್ ಆಗಿದೆ. ಒಂದೇ ಒಂದು ರತ್ನ ಖಚಿತ ಆಭರಣ ಅಥವಾ ಒಂದಕ್ಕಿಂತ ಹೆಚ್ಚು ಹರಳುಗಳಿರುವ ಆಭರಣಗಳು ಕೂಡ ಫ್ಯಾಷನ್ ಸ್ಟೇಟ್‌ಮೆಂಟ್ ಕೊಡಬಲ್ಲವು.

ರೂಬಿ ಹರಳುಗಳನ್ನು ಚಿನ್ನದಲ್ಲಿ ಕೂರಿಸಿ ಮಾಡಿದ ಒಡವೆಗಳು ಅತ್ಯಾಕರ್ಷಕ. ಅದು ನೆಕ್ಲೇಸ್ ಆಗಿರಲಿ, ಕಿವಿಯೋಲೆ, ಉಂಗುರ, ಪೆಂಡೆಂಟ್, ಬ್ರೇಸ್ಲೆಟ್, ಬಳೆಯೇ ಆಗಿರಲಿ, ಸಖತ್ ಲುಕ್ ಕೊಡುತ್ತದೆ. ರೂಬಿ ಹರಳು ಆಭರಣದ ಚೆಲುವು, ಸೊಬಗನ್ನೇ ಇಮ್ಮಡಿಸಬಲ್ಲದು. ಉಡುಪಿನ ಬಣ್ಣಕ್ಕೆ ತಕ್ಕುದಾದ ಮ್ಯಾಚಿಂಗ್ ಇಲ್ಲವೇ ಕಾಂಟ್ರಾಸ್ಟ್ ಬಣ್ಣದ ಒಡವೆಗಳನ್ನು ಧರಿಸುವುದು ಈಗಿನ ಟ್ರೆಂಡ್. ಒಡವೆಯಲ್ಲೂ ಮಿಕ್ಸ್ ಅಂಡ್ ಮ್ಯಾಚ್ ಪರಿಕಲ್ಪನೆ ಬಂದಾಗಿನಿಂದ ಮದುವೆ, ರಿಸೆಪ್ಷನ್‌ಗಳಂಥ ಸಮಾರಂಭಗಳಿಗೆ ಇದೇ ಒಡವೆಗಳು ಪ್ರಧಾನ ಪಾತ್ರ ವಹಿಸಲಾರಂಭಿಸಿವೆ. ಒಡವೆ ಡಿಸೈನ್ ಸಾಮಾನ್ಯವಾಗಿ ಔಟ್ ಆಫ್ ಫ್ಯಾಷನ್ ಆಗುವುದಿಲ್ಲ. ಎಂದಿಗೂ ಆಭರಣದ ಅಂದ ಮಸುಕಾಗುವುದಿಲ್ಲ. ಹೀಗಾಗಿ ಮಹಿಳೆಯರು ಒಡವೆ ಖರೀದಿ ಬಗ್ಗೆ ಮುತುವರ್ಜಿ ವಹಿಸುವುದು ಸಹಜ.

## ಹಬ್ಬಗಳಿಗೆ ಒಡವೆ ಸಾಥಿ!

ಇದೀಗ ಸಾಂಪ್ರದಾಯಿಕ ಹಬ್ಬಕ್ಕೆ ಪಾರಂಪರಿಕೆ ಒಡವೆಗಳು ಸಾಥಿ ಕೊಡುತ್ತಿವೆ. ಹೆರಿಟೇಜ್ ಆಭರಣಗಳು ಆಧುನಿಕ ಸ್ಪರ್ಶದೊಂದಿಗೆ ಹೆಂಗಳೆಯರ ಮನತಣಿಸುತ್ತಿವೆ. ತಿಜೋರಿಯಿಂದ ರೇಷ್ಮೆ ಸೀರೆ ತೆಗೆದು ಅಷ್ಟೇ ಬಿಗುಮಾನದಿಂದ ವೈವಿಧ್ಯಮಯ ಒಡವೆ ಹಾಕಿಕೊಂಡು ಹಬ್ಬವನ್ನು ಆಚರಿಸುವುದರಲ್ಲಿ ಮಹಿಳೆಯರ ಸಂಭ್ರಮವೂ ಅಡಗಿದೆ.

ಅಜ್ಜಿ ಕಾಲದ ಕಾಸಿನ ಸರಕ್ಕೆ ಈಗ ಎಲ್ಲಿಲ್ಲದ ಕಿಮ್ಮತ್ತು. ಹಿಂದೆ ಅಜ್ಜಿಯರ ಕತ್ತಿನಲ್ಲಿ ಮಿಂಚುತ್ತಿದ್ದ ಕಾಸಿನ ಸರ ಇದೀಗ ಫ್ಯಾಷನ್ ಸ್ಪರ್ಶದೊಂದಿಗೆ

# ಚಿನ್ನ ಕರಗುವ ಸಮಯ



ದಾಮೋದರ ಕೆ. ಆಚಾರ್ಯ

ಚಿನ್ನವನ್ನು ಅತ್ಯಂತ ಸುಲಭವಾಗಿ ಕರಗಿಸಿ ಬೇಕಾದ ರೂಪ ಕೊಡಬಹುದು. ಒಡವೆಗಳ ಮಟ್ಟಿಗೆ ಚಿನ್ನಕ್ಕಿದು ಪ್ಲಸ್ ಪಾಯಿಂಟ್. ಪ್ರಕೃತಿಗೆ ಅತ್ಯಂತ ಸನಿಹವಾದ ರೂಪ, ಮಾದರಿ, ಆಕಾರವನ್ನು ಚಿನ್ನದಲ್ಲಿ ಒಡಮೂಡಿಸಬಹುದು. ಹೀಗಾಗಿಯೇ ಹೂವು, ಹಣ್ಣು, ತರುಲತೆಗಳು, ದೇವಾನುದೇವತೆ, ಪ್ರಾಣಿ, ಪಕ್ಷಿಗಳು ಚಿನ್ನದಲ್ಲಿ ಸೃಷ್ಟಿಯಾಗುತ್ತವೆ. ಚಿನ್ನವನ್ನು ಕರಗಿಸಿ ಮಾಡಿದ ಮೋಹಕ ಒಡವೆ ಯುವತಿಯರ ಮನವನ್ನೂ ಕರಗಿಸುವುದರಲ್ಲಿ ಸಂಶಯವಿಲ್ಲ.

'ಮಹಿಳೆಯರಲ್ಲಿ ಚಿನ್ನದ ಆಭರಣ ಬಗ್ಗೆ ಇರುವ ಕ್ರೇಜ್ ಎಂದಿಗೂ ಕಡಿಮೆಯಾಗುವುದಿಲ್ಲ. ಕಾಲಕ್ಕೆ ತಕ್ಕ ಹಾಗೆ ಫ್ಯಾಷನ್‌ನಲ್ಲಿ ಬದಲಾವಣೆ ಆಗುವ ಹಾಗೆ ಮಹಿಳೆಯರೂ ಇದಕ್ಕೆ ಒಗ್ಗಿಕೊಂಡಿದ್ದಾರೆ. ಪ್ರಾದೇಶಿಕತೆಗೆ ತಕ್ಕಂತೆ ಒಡವೆ ವಿನ್ಯಾಸ ಹಾಗೂ ಮಹಿಳೆಯರ ಅಭಿರುಚಿಗಳಲ್ಲಿ ವ್ಯತ್ಯಾಸವಾಗುತ್ತದೆ. ಹಳ್ಳಿಗಳಲ್ಲಿ ಮಹಿಳೆಯರು ಇಂದಿಗೂ ಹಳೆಯ ವಿನ್ಯಾಸ, ಹೆಚ್ಚು ಚಿನ್ನವಿರುವ ಒಡವೆಗಳನ್ನೇ ಬಯಸಿದರೆ, ಪಟ್ಟಣ–ನಗರಗಳಲ್ಲಿರುವ ಮಹಿಳೆಯರು ಹಗುರವಾದ, ಫ್ಯಾಷನಬಲ್ ಆಗಿರುವ ಒಡವೆಯನ್ನು ಇಷ್ಟಪಡುತ್ತಾರೆ. ಟ್ರೆಂಡ್‌ಗೆ ತಕ್ಕಂತೆ ಜನರ ಅಭಿರುಚಿಯಲ್ಲೂ ಬದಲಾವಣೆಯಾಗುತ್ತದೆ' ಎಂದು ಹೇಳುತ್ತಾರೆ ಕಳೆದ ಸುಮಾರು 40 ವರ್ಷಗಳಿಂದ ಚಿನ್ನದ ಆಭರಣ ತಯಾರಿಕೆಯಲ್ಲಿ ತೊಡಗಿರುವ ಪುತ್ತೂರಿನ ಕಮಲ್ ಜ್ಯುವೆಲ್ಲರಿಯ ಮಾಲಿಕ ದಾಮೋದರ ಕೆ. ಆಚಾರ್ಯ.

'ನಮ್ಮಲ್ಲಿ ಚಿನ್ನದಲ್ಲಿ ಕುಸುರಿ ಕೆಲಸ ಮಾಡುತ್ತೇವೆ. ಇದು 'ಹ್ಯಾಂಡ್‌ಮೇಡ್' ಆಗಿದ್ದು ಹೆಚ್ಚಿನ ಬಾಳಿಕೆಯೂ ಬರುತ್ತದೆ. ಫಿನಿಶಿಂಗ್ ಕೂಡ ಚೆನ್ನಾಗಿರುತ್ತದೆ. ಮೆಷಿನ್‌ನಲ್ಲಿ ಮಾಡಿದ ಆಭರಣ ಹೆಚ್ಚು ಕಾಲ ಬಾಳಿಕೆ ಬಾರದು. ಪದೇಪದೇ ಬದಲಾಯಿಸಬೇಕಾಗುತ್ತದೆ. ವೇಸ್ಟೇಜ್ ಕೂಡ ಹೆಚ್ಚು. ಚಿನ್ನದ ನಷ್ಟವೂ ಆಗುತ್ತದೆ' ಎಂದು ಒಡವೆ ತಯಾರಿಕೆಯಲ್ಲಿನ ತಾಂತ್ರಿಕ ಅಂಶಗಳನ್ನು ವಿವರಿಸುತ್ತಾರೆ ದಾಮೋದರ್.

ಯುವತಿಯರು ಈಗೀಗ ಕೋಲ್ಕತ್ತಾ ಡಿಸೈನ್ ಒಡವೆ ಹೆಚ್ಚು ಇಷ್ಟಪಡುತ್ತಿದ್ದಾರೆ. ಜೊತೆಗೆ 'ಹಾಲೊ ಡಿಸೈನ್' ಕೂಡ ಯುವತಿಯರ ಮೆಚ್ಚು ಆಗಿದೆ. ಹಾಲೊ ವಿನ್ಯಾಸದ ಒಡವೆಯಲ್ಲಿ ಒಳಭಾಗ ಟೊಳ್ಳು ಇದ್ದು ಆಭರಣ ಹಗುರವಾಗಿರುತ್ತದೆ. ಇದಕ್ಕೆ ಕಡಿಮೆ ಚಿನ್ನ ಸಾಕು. ಜೊತೆಗೆ, ತೆಂಡೂಲ್ಕರ್ ಚೈನ್' ಲೋಟಸ್' ಲೀಫ್ ಚೈನ್' ಕರಾಫ್ ಚೈನ್' ರೇಡಿಯೊ ಚೈನ್' ಗ್ಲಾಸ್ ಕಟಿಂಗ್ ಚೈನ್ ಈಗೀಗ ಹೆಚ್ಚು ಬೇಡಿಕೆ ಪಡೆದುಕೊಂಡಿದೆ. ಇವೆಲ್ಲವೂ ಗ್ರಾಹಕರಿಗೆ 'ಕ್ಲಾಸಿಕ್ ಇಂಪ್ರೆಷನ್' ನೀಡುತ್ತವೆ ಎಂದು ವಿವರಿಸುತ್ತಾರೆ.